ಗಮನ ಸೆಳೆಯುವ ಸೂಚನೆ

ಕೋಲಾರ ತಾಲ್ಲೂಕಿನಲ್ಲಿ ಕಾಲರಾ ಮತ್ತು ಕೆರುಳು ಬೇನೆ ತಗುಲಿ ಹತ್ತಕ್ಕಿಂತಲೂ ಹೆಚ್ಚು ಜನ ಸತ್ತಿರುವುದು.

ಶ್ರೀ ಸಿ. ಬೈರೇಗೌಡ,—ಅಧ್ಯಕ್ಷರೆ, ಕೋಲಾರ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕಾಲರಾ ಅಥವಾ ಕರಳುಬೇನೆ ತಗುಲಿ ಸುಮಾರು ಹತ್ತಕ್ಕಿಂತಲೂ ಹೆಚ್ಚು ಮಂದಿ ಮಡಿದಿರುವುದರ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕೋಲಾರ ತಾಲ್ಲೂಕಿನ (೨೧) ಗ್ರಾಮಗಳಲ್ಲಿ ೨ನೇ ಜೂನ್ ೧೯೯೦ ರಿಂದ ೨೦ನೇ ಜೂನ್ ೧೯೯೦ ವರೆಗೆ (೬೬) ವಾಂತಿ ಬೇಧಿ ಪ್ರಕರಣಗಳು ಕಾಣಿಸಿಕೊಂಡಿದ್ದು ನಾಲ್ವರು (೪ ಜನ) ಮತ್ತು ಗೌರಿಬಿದನೂರಿನಲ್ಲಿ (೨ ಜನ) ದೈವಾಧೀನರಾಗಿರುತ್ತಾರೆ. ಕೋಲಾರ ಜಿಲ್ಲೆಯಲ್ಲಿ ಒಟ್ಟು ೧೭೧ ಪ್ರಕರಣಗಳು ೬೧ ಗ್ರಾಮಗಳಲ್ಲಿ ವಂದಿಯಾಗಿದ್ದು ಒಟ್ಟು ೬ ಜನ ಮೃತ ಪಟ್ಟಿದ್ದಾರೆ. ಇವುಗಳಲ್ಲಿ ಒಟ್ಟು ೧೧೦ ಪ್ರಕರಣಗಳಲ್ಲಿ ಮಲಪರೀಕ್ಷೆ ಮಾಡಿದ್ದು ೨೨ ಪ್ರಕರಣಗಳಲ್ಲಿ ಕಾಲರಾ ಖಚಿತವಾಗಿದೆ. ೨೦ನೇ ಜೂನ್ ೧೯೯೦ ರಿಂದ ಹೊಸ ಪ್ರಕರಣಗಳು ಕಂಡು ಬಂದಿಲ್ಲ. ರೋಗದ ಮೊದಲನೆಯ ಪ್ರಕರಣ ೨ನೇ ಜೂನ್ ೧೯೯೦ರಂದು ಬೀಚಗೊಂಡನಹಳ್ಳಿಯಿಂದಲೂ ಮತ್ತು ಕಡೆಯ ಪ್ರಕರಣ ಚಂಚೇಮಲ್ಲೇ ಗ್ರಾಮದಿಂದ ವರದಿಯಾಗಿರುತ್ತದೆ.

ರೋಗ ಪೀಡಿತ ಹಳ್ಳಿಗಳಲ್ಲಿ ಹೊಸ ರೋಗಿಗಳನ್ನು ಗುರುತಿಸಲು ದೈನಂದಿಕ ಸಮೀಕ್ಷೆಯನ್ನು ಆರೋಗ್ಯ ಕಾರ್ಯಕರ್ತರು ಮತ್ತು ಹಿರಿಯ ಆರೋಗ್ಯ ಸಹಾಯಕರಿಂದ ಮಾಡಿಸಲಾಗುತ್ತಿದೆ. ಇವರು ಪ್ರತಿ ದಿನ ಮನೆ ಮನೆಗೂ ಭೇಟಿ ಕೊಟ್ಟು ಹೊಸ ರೋಗಿಗಳನ್ನು ಗುರುತಿಸಿ ಉಪಶಮನಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಿರುತ್ತಾರೆ.

ಹದಿಮೂರು ಜನ ರೋಗಿಗಳಿಗೆ ಎಸ್. ಎನ್. ಆರ್. ಆಸ್ಪತ್ರೆಯಲ್ಲಿ (ಕೋಲಾರದಲ್ಲಿ) ಒಳರೋಗಿ ಚಿಕಿತ್ಸೆಯನ್ನು ಕೊಡಿಸಲಾಗಿದೆ. ಇವರೆಲ್ಲರೂ ಗುಣಮುಖರಾಗಿದ್ದಾರೆ. ಹತ್ತು (೧೦) ರೋಗಿಗಳು ಕ್ಯಾಲನೂರು ಆಸ್ಪತ್ರೆಯಲ್ಲಿ ಹೊರರೋಗಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಎಂಟು ರೋಗಿಗಳು ಹೋಳೂರಿನ ಆಸ್ಪತ್ರೆಯಲ್ಲಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಇಬ್ಬರು ಖಾಸಗಿ ವೈದ್ಯರಲ್ಲಿ ಚಿಕಿತ್ಸೆಯನ್ನು ಪಡೆದಿದ್ದಾರೆ. ಮಿಕ್ಕ (೩೩) ರೋಗಿಗಳಿಗೆ ಅವರ ಮನೆಗಳಲ್ಲಿಯೇ ಚಿಕಿತ್ಸೆಯನ್ನು ಕೊಡಲಾಗಿದೆ.

ಜಿಲ್ಲೆಯಲ್ಲಿ ೨೫ ಬಾವಿಗಳಿಗೆ ಮತ್ತು ಹೋಳೂರಿನ ಒಂದು ಕುಂಟೆಗೆ ಚಲುವೆ ಪುಡಿಯನ್ನು (ಬ್ಲೀಚಿಂಗ್ ಪೌಡರನ್ನು) ಬಳಸಿ, ನೀರನ್ನು ಉಪಯುಕ್ತ ಮಾಡಲಾಗಿದೆ. ಕುಂಟೆಯಲ್ಲಿ ಮಲಿನ ಮಾಡದಂತೆ ನೋಡಿಕೊಳ್ಳಲು ಹಾಗೂ ಎಚ್ಚರಿಕೆ ವಹಿಸಲು ಒಂದು ಸ್ಥಳೀಯ ಮಿತಿಸಲು ತಂಡವನ್ನು ರಚಿಸಲು ತಿಳಿಸಲಾಗಿದೆ.

ಆಸ್ಪತ್ರೆ ಮತ್ತು ಉಪಕೇಂದ್ರಗಳಿಗೆ ಇಂತಹ ಪ್ರಕರಣಗಳನ್ನು ದಿಟ್ಟವಾಗಿ ಎದುರಿಸಲು ಸಾಧ್ಯವಾಗುವಂತೆ (೬೪೦) ಓ.ಆರ್.ಎಸ್. ಪೊಟ್ಟಣಗಳನ್ನು ವಾಂತಿ ಬೇಧಿ ತಡೆಗಟ್ಟುವ ಇತರೆ ಔಷಧಗಳನ್ನು ಹಂಚಲಾಗಿದೆ.

ಅಲ್ಲಿರುವ ಔಷಧಗಳ ಪ್ರಮಾಣವನ್ನು ಬಲಪಡಿಸಲು ಕ್ರಮಗಳನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ. ಸರ್ಕಾರದ ಔಷಧದ ಮಳಿಗೆಯಿಂದ ೫೦೦ ಪಾಲಿಥೀನ್ ಚೀಲಗಳಲ್ಲಿ ಗ್ಲೂಕೋಸ್ ಮತ್ತು ಸೆಲೈನ್‌ಗಳನ್ನು ೧೯ನೇ ಜೂನ್ ೧೯೯೦ ರಂದು ಕೊಡಲಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ಅವರಿಂದ ನಿರ್ದೇಶಿಸಲ್ಪಟ್ಟ ಉಪ ಆರೋಗ್ಯ ಅಧಿಕಾರಿಗಳು ರೋಗ ಪೀಡಿತ ಗ್ರಾಮಗಳಿಗೆ ಭೇಟಿ ಕೊಟ್ಟು ಪ್ರತಿಬಂಧಕ ಕ್ರಮಗಳನ್ನು ಪರಿವೀಕ್ಷಿಸಿರುತ್ತಾರೆ.

೨೫-೬-೧೯೯೦ ರಂದು ಸರ್ಕಾರದ ಔಷಧಿ ಮಳಿಗೆಯಿಂದ ೨೦,೦೦೦ ರೂಪಾಯಿಂಗಳ ಮೌಲ್ಯದಷ್ಟು ಔಷಧಿಗಳನ್ನು ಕೂಡಲೇ ಸರಬರಾಜು ಮಾಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಹಾಗೂ ಕಾಲರ ಲಸಿಕೆಯಂನ್ನು ಸಪ್ರಮಾಣದಲ್ಲಿ ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಇಲ್ಲಿಯಂ ವರೆಗೆ ೧೩,೫೦೭ ಜನರಿಗೆ ಚುಚ್ಚುಮದ್ದು ಹಾಕಲಾಗಿದೆ.

ಕೋಲಾರ ತಾಲ್ಲೂಕಿನಲ್ಲಿ ೭,೮೧೨ ಜನರಿಗೆ ಕಾಲರಾ ಚುಚ್ಚುಮದ್ದನ್ನು ಸಹಾ ಹಾಕಲಾಗಿದೆ.

ರೋಗಿಗಳಿಂದ ಮಲಿನವಾದ (೨೧೦) ಪ್ರದೇಶಗಳಲ್ಲಿ ಕ್ರಿಮಿನಾಶಕ ವಸ್ತುಗಳನ್ನು ಬಳಸಿ ಸ್ವಚ್ಛ ಮತ್ತು ಸುರಕ್ಷಿತ ಮಾಡಲಾಗಿದೆ. ಈ ಕ್ರಮಂಗಳಿಂದ ರೋಗವನ್ನು ಒಬ್ಬರಿಂದ ಮತ್ತೊಬ್ಬರಿಗೆ ಹರಡದಂತೆ ನೋಡಿಕೊಳ್ಳಲಾಗಿದೆ.

ಕೆ.ಜಿ.ಎಫ್. ನಗರವನ್ನು ಕಾಲರ ಪೀಡಿತ ಪ್ರದೇಶ ಎಂದು ಘೋಷಿಸಿ, ಹಣ್ಣು ಅಶುಚಿಯಾದ ಆಹಾರಗಳ ಮಾರಾಟವನ್ನು ನಿಷೇಧಿಸಲಾಗಿದೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಆ ಪ್ರದೇಶಕ್ಕೆ ಭೇಟಿ ಕೊಟ್ಟಿದ್ದೆ. ಭೇಟಿ ಕೊಟ್ಟಿದ್ದ ಸಂದರ್ಭದಲ್ಲಿ ಒಂದು ಗ್ರಾಮ ಅಂದರೆ ಕ್ಯಾಲನೂರು ಗ್ರಾಮದಲ್ಲಿ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಹೇಳುತ್ತೇನೆ. ಅಲ್ಲಿ ನಾಲ್ಕು ಸತ್ತಿದ್ದರು ನಿಮ್ಮ ಜಿಲ್ಲಾ ಆರೋಗ್ಯ ಅಧಿಕಾರಿಗಳಾಗಲೀ, ಬೇರೆ ಯಾವುದೇ ಅಧಿಕಾರಿಯಾಗಲೀ ಆ ಊರಿಗೆ ಭೇಟಿ ಕೊಟ್ಟಿಲ್ಲ. ೨ನೇ ತಾರೀಖು ಎಂದು ತಾವು ಹೇಳುತ್ತಿದ್ದೀರಿ. ನಾನು ಹೋಗಿರುವುದು ೧೪ನೇ ತಾರೀಖು ಅಂದರೆ ೧೫ ದಿವಸಗಳ ಕಾಲ ಅಲ್ಲಿಗೆ ಯಾರೂ ಹೋಗಿಲ್ಲ. ಕೋಲಾರಕ್ಕೆ ೧೦ ಮೈಲಿ ದೂರದಲ್ಲಿ ಈ ಗ್ರಾಮ ಇದೆ. ಕೋಲಾರದ ಆರೋಗ್ಯ ಅಧಿಕಾರಿಯು ಕೂಡ ಈ ಗ್ರಾಮಕ್ಕೆ ಭೇಟಿ ಕೊಟ್ಟಿಲ್ಲ. ಇನ್ನು ರಕ್ಷಣಾ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ ೫ ಲೀಟರ್ ಫಿನಾಯಿಲ್ ಕೊಟ್ಟಿದ್ದಾರೆ. ಅಷ್ಟು ದೊಡ್ಡ ಊರಿಗೆ ಅದೂ ೫ ಸಾವಿರ ಜನಸಂಖ್ಯೆ ಇರತಕ್ಕ ಊರಿಗೆ ೫ ಲೀಟರ್ ಕೊಟ್ಟರೆ ಏನು ಸ್ವಚ್ಛತಾ ಕಾರ್ಯಕ್ರಮ ಮಾಡಲಂ ಸಾಧ್ಯವಾಗುತ್ತದೆ ? ಇದರ ಜೊತೆಗೆ ಬ್ಲೀಚಿಂಗ್ ಪೌಡರ್ ಕೊಟ್ಟಿದ್ದಾರೆ. ಅಲ್ಲಲ್ಲಿ ಬ್ಲೀಚಿಂಗ್ ಪೌಡರ್ ಹಾಕಿದ್ದರು. ೫ ಸಾವಿರ ಜನಸಂಖ್ಯೆ ಇರತಕ್ಕ ಈ ಗ್ರಾಮದಲ್ಲಿ ಶೇಕಡ ೫೦ರಷ್ಟು ಜನರಿಗೂ ವ್ಯಾಕ್ಸಿನೇಷನ್ ಮಾಡಿರಲಿಲ್ಲ. ಇದು ಕೇವಲ ೪ ಜನ ಅಲ್ಲ, ಇನ್ನೂ ಹೆಚ್ಚು ಜನ ಸತ್ತಿದ್ದಾರೆ. ಇಷ್ಟು ಜನರು ಸಾಯಬೇಕಾದರೆ ಅದಕ್ಕೆ ಕಾರಣ ನಿಮ್ಮ ಆರೋಗ್ಯ ಇಲಾಖೆಯವರು ತಮ್ಮ ಕರ್ತವ್ಯ ಲೋಪ ಮಾಡಿರುವುದು. ಅವರು ಏನು ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಪರಿಸ್ಥಿತಿ ಈ ರೀತಿ ಆಗಿದೆ. ಈ ಕರ್ತವ್ಯ ಲೋಪ ಮಾಡಿರುವ ಅಧಿಕಾರಿಗಳ ಮೇಲೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು. ಇಂತಹ ಎಪಿಡಿಮಿಕ್ ಬಂದಾಗ ಸ್ಪೆಷಲ್ ಸ್ಕ್ವಾಡ್ ಎಂದು ಮಾಡಬೇಕಾಗಿತ್ತು, ಆದರೆ ಇಲ್ಲಿ ಮಾಡಿರಲಿಲ್ಲ. ಆಸ್ಪತ್ರೆಯ ನರ್ಸ್‌ಗಳು, ನಿಮ್ಮ ಹೆಲ್ತ್ ವರ್ಕರ್ಸ್ ಹೀಗೆ ಕೆಲವರು ಮಾತ್ರ ಆ ಪ್ರದೇಶದಲ್ಲಿ ಈ ಕಾರ್ಯಕ್ರಮ ಕೈಕೊಂಡಿದ್ದರು. ಕ್ಯಾಲನೂರಿನ ಆಸ್ಪತ್ರೆಯ ಸಿಬ್ಬಂದಿ ಮಾತ್ರ ಕ್ರಮ ತೆಗೆದುಕೊಂಡಿದ್ದರು. ಇನ್ನೂ ಅನೇಕ ಕಡೆ ಈ ವ್ಯಾಧಿ ತಲುಪಿದೆ. ಅಂತಹ ಹಳ್ಳಿಗಳಿಗೆ ಹೋಗುವ ಕೆಲಸ ಮಾಡಿಲ್ಲ. ವ್ಯಾಕ್ಸಿನೇಷನ್ ಅನ್ನು ಎಷ್ಟು ಪ್ರಮಾಣದಲ್ಲಿ ಮಾಡಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಮಾಡಿಲ್ಲ. ಇದಕ್ಕೆ ನಿಮ್ಮ ಸ್ಥಳೀಯ ಅಧಿಕಾರಿಗಳು ಪೂರ್ತಿ ಜವಾಬ್ದಾರರಾಗುತ್ತಾರೆ. ಅವರು ಕರ್ತವ್ಯ ಲೋಪ ಮಾಡಿದ್ದಾರೆ. ಆದುದರಿಂದ ಇವತ್ತು ಗ್ರಾಮಾಂತರ ಜನರಿಗೆ ಅನಾನುಕೂಲವಾಗಿದೆ, ತೊಂದರೆಯಾಗಿದೆ. ನೀವು ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದು ಹೇಳಬೇಕು. ಮುಖ್ಯವಾಗಿ ನೀವು ಆ ಸ್ಥಳಕ್ಕೆ ಭೇಟಿ ಕೊಡಬೇಕು. ಅದಂ ಕೇವಲ ೩೦-೩೫ ಮೈಲಿ ದೂರದಲ್ಲಿದೆ. ತಾವು ಅಲ್ಲಿಗೆ ಭೇಟಿ ನೀಡಿ ಕರ್ತವ್ಯ ಲೋಪ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುವ ಆಶ್ವಾಸನೆ ಕೊಡುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ಈ ಒಂದು ಕಾಲರ ಕಾಯಿಲೆ ಕಳೆದ ೨೦ನೇ ತಾರೀಖಿನಿಂದ ಕಂಟ್ರೋಲಿಗೆ ಬಂದಿದೆ. ನಮ್ಮ ಜಂಟಿ ನಿರ್ದೇಶಕರು ಈಗಾಗಲೇ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ ಅಲ್ಲಿನ ಅಧಿಕಾರಿಗಳು ಏನಾದರೂ ಕರ್ತವ್ಯ ಲೋಪ ಮಾಡಿದ್ದರೆ ನಾನು ತನಿಖೆ ನಡೆಸಿ ಖಂಡಿತವಾಗಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಆ ಸ್ಥಳಕ್ಕೆ ಬರಬೇಕೆಂದು ಹೇಳಿದ್ದೀರಿ ಇವತ್ತು ಮತ್ತು ನಾಳೆ ಆರೋಗ್ಯ ಇಲಾಖೆಯ ವರದಿಯ ಮೇಲೆ ಜರ್ಜ್

ಇರುವುದರಿಂದ ಸದನ ಬಿಟ್ಟು ಹೋಗಲು ಸಾಧ್ಯವಾಗುವುದಿಲ್ಲ. ಸಾಧ್ಯವಾದರೆ ಆದಿತ್ಯವಾರ ನಾನೇ ಆ ಸ್ಥಳಕ್ಕೆ ಭೇಟಿ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ.—ನಿಮ್ಮ ಇಲಾಖೆ ತಪ್ಪಿನಿಂದ ನಿಮ್ಮ ಪ್ರಕಾರ ನಾಲ್ಕು ಜನ ಸತ್ತಿದ್ದಾರೆಂದು ಹೇಳಿದ್ದೀರಿ. ಈ ರೀತಿ ಸತ್ತವರ ಕುಟುಂಬದವರಿಗೆ ಸರ್ಕಾರದಿಂದ ಏನಾದರೂ ಪರಿಹಾರ ಕೊಡಿಸಲು ಭರವಸೆ ಕೊಡುತ್ತೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್.—ಸರಕಾರದಿಂದ ಪರಿಹಾರ ಕೊಡಲಿಕ್ಕಾಗುವುದಿಲ್ಲ, ಮಾನ್ಯ ಮುಖ್ಯಮಂತ್ರಿಗಳ ರಿಲೀಫ್ ಫಂಡಿನಿಂದ ಏನಾದರು ಕೊಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ.—ನನ್ನದು ಒಂದೇ ಒಂದು ಸಬ್‌ಮಿಷನ್ ಇದೆ ತಂಮಕೂರಿಂ ಜಿಲ್ಲೆಯಲ್ಲಿ ಕೂಡ ೬ ಜನ ಸತ್ತಿದ್ದಾರೆಂದು ಈಗ ತಾನೆ ವರ್ತಮಾನ ಬಂದಿದೆ. ಇದನ್ನು ಆರೋಗ್ಯ ಸಚಿವರ ಗಮನವನ್ನು ಸೆಳೆದಿದ್ದೇನೆ. ತಾವು ಈ ಬಗ್ಗೆ ವಿವರಗಳನ್ನು ತರಿಸಿ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ವಿಷಯವನ್ನು ತರಿಸಿಕೊಡುತ್ತೇನೆ.

ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ಮೀಸಲಾತಿ ನಿಯಮಗಳಿಗನುಸಾರವಾಗಿ ದಿನಗೂಲಿ ನೌಕರರನ್ನು ಖಾಯಂಗೊಳಿಸುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸುಪ್ರೀಂಕೋರ್ಟಿನ ಆದೇಶದ ಮೇರೆಗೆ ದಿನಗೂಲಿ ನೌಕರರನ್ನು ಖಾಯಂಗೊಳಿಸುವಾಗ ಮೀಸಲಾತಿ ನಿಯಮವ ಅನುಸರಿಸುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಇಲ್ಲಿ ಕೆಲವು ವಿಚಾರ ಗಳನ್ನು ಹೇಳಬೇಕೆಂದಿದ್ದೇನೆ, ಇದಕ್ಕೆ ಹೇಳಿಕೆ ಏಕೆ ಕೊಡಲಿಲ್ಲವೆಂದರೆ ಕಳೆದ ಬಾರಿ ಇದು ಗಮನ ಸೆಳೆಯುವ ಸೂಚನೆಯಾಗಿ ಈ ಸದನದಲ್ಲಿ ಬಂದಿತು. ಆಗ ಸನ್ಮಾನ್ಯ ಸದಸ್ಯರುಗಳು ಕೆಲವು ಮಾಹಿತಿಗಳನ್ನು ಕೇಳಿದ್ದಾರೆ ಆದರೆ ಆಯಾಯ ಸಂಬಂಧ ಪಟ್ಟ ಇಲಾಖೆಯ ಮುಖ್ಯಸ್ಥರ ಹತ್ತಿರ ಕೂಡ ಇಲ್ಲ ಆದನ್ನು ಕೆಳಗಿನ ಹಂತದಿಂದ ಮಾಹಿತಿ ಸಂಗ್ರಹ ಮಾಡುವುದಕ್ಕೆ ಸರಕಾರ ಈಗಾಗಲೇ ಆದೇಶ ಕೊಟ್ಟಿದೆ. ಬಹುಶ: ಇನ್ನು ೧೦–೨೦ ದಿವಸದಲ್ಲಿ ಈ ಮಾಹಿತಿ ಬರುತ್ತದೆ. ಇದನ್ನು ಸಂಗ್ರಹ ಮಾಡುವುದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ತಮ್ಮ ಹತ್ತಿರ ಕೂಡ ಇದರ ಬಗ್ಗೆ ವಿನಂತಿಮಾಡಿಕೊಂಡಿದ್ದೇನೆ, ಸ್ವಲ್ಪ ಇನ್‌ಫರ್ಮೇಷನ್ ಇದೆ. ಪೂರ್ತಿಯಾದಂತಹ ಮಾಹಿತಿ ಇಲ್ಲ ತಾವು ಸ್ವಲ್ಪ ಸಮಯಕೊಟ್ಟರೆ....

ಉಪಾಧ್ಯಕ್ಷರು.—ಸ್ವಲ್ಪ ಸಮಯ ಕೊಟ್ಟು ಪೂರ್ಣ ಉತ್ತರವನ್ನು ಸಂಬಂಧಪಟ್ಟವರಿಂದ ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಬಹಳ ಮಹತ್ವವಾದ ಪ್ರಶ್ನೆ ಇದರಲ್ಲಿ ರೋಸ್ಟರ್ ಸಿಸ್ಟಂ ಫಾಲೋ ಮಾಡಬೇಕೆನ್ನುವ ಅವಶ್ಯಕತೆ ಇದೆ. ೫೫ ಸಾವಿರ ಜನರನ್ನು ಸುವಾಮೋಟೋ ರೆಗ್ಯುಲರೈಸ್ ಮಾಡುತ್ತಿದ್ದೀರಿ ಇಷ್ಟು ಜನರನ್ನು ರೆಗುಲರೈಸ್ ಮಾಡಿದ ಮೇಲೆ...

ಶ್ರೀ ಎಂ ವೀರಪ್ಪ ಮೊಯಿಲಿ.—ನಾನು ಹೇಳಿಕೆಯನ್ನು ಕೊಟ್ಟಿಲ್ಲ. ಈ ಸೆಷನ್ ಒಳಗೆ ಅಂದರೆ ೧೫–೨೦ ದಿವಸದಲ್ಲಿ ಹೇಳಿಕೆ ಕೊಡುತ್ತೇನೆ.

ಉಪಾಧ್ಯಕ್ಷರು,—ಈ ಅಧಿವೇಶನದಲ್ಲಿಯೇ ಹೇಳಿಕೆ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನು ೪–೫ ದಿವಸಗಳಲ್ಲಿ ಯಾದರೂ ಹೇಳಿಕೊಟ್ಟರೆ ಪರವಾಗಿಲ್ಲ ಇಲ್ಲದಿದ್ದರೆ ನೀವು ಸರ್ಕಾರಿ ಆಜ್ಞೆ ಹೊರಡಿಸಿ ರೋಸ್ಟರ್ ಪ್ರಕಾರ ಫಿಲಪ್ ಮಾಡುವಾಗ ಬ್ಯಾಕ್‌ವರ್ಡ್‌ಗೆ ಕೊಡುತ್ತೇವೆ ಎಸ್‌ಟಿ ಎಸ್‌ಸಿಯವರಿಗೆ ಕೊಡುತ್ತೇವೆಂದು ಹೇಳಿ ಈಗಿರುವವರನ್ನೇ ರೆಗ್ಯುಲರೈಸ್ ಮಾಡಿದರೆ ತಪ್ಪಾಗುತ್ತದೆ.

SRI M. VEERAPPA MOILY.—I think I need not give a partial information. Better I give full information. ಈ ಅಧಿವೇಶನದ ಕೊನೆ ದಿವಸ ಇದನ್ನು ಹಾಕಿದರೆ ಅನುಕೂಲವಾಗುತ್ತದೆ ಆಗ ಪೂರ್ತಿ ಮಾಹಿತಿಯನ್ನು ಈ ಸದನಕ್ಕೆ ನೀಡಲು ಸಾಧ್ಯವಾಗುತ್ತದೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.